ಕನ್ನಡಪ್ರಭ

ಜಯನಗರದ ಜೈನ್ ಕಾಲೇಜಿನಲ್ಲಿ ಕಾರ್ಪೊರೇಟ್ ಎಕ್ಸ್‌ಪೋ

# ಉದ್ಯಮಶೀಲತೆ ಮೇಳದಲ್ಲಿ ಸಂಸ್ಕೃತಿಯ ಅನಾವರಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಜಯನಗರದ ಜೈನ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಕಾರ್ಪೊರೇಟ್ ಎಕ್ಸ್‌ಪೋ-2016' ಮೇಳ ಕೇವಲ ಉದ್ಯಮಶೀಲತೆಯ ಪ್ರದರ್ಶನವಾಗಿರದೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಯಾಗಿ ಮಾರ್ಪಟ್ಟಿತ್ತು.

'ಕೇವಲ ಉದ್ಯಮವಷ್ಟೇ ಅಲ್ಲದೆ ನಮ್ಮ ಸಂಸ್ಕೃತಿಯನ್ನೂ ಸಾರುವಲ್ಲಿ ನಾವು ಮುಂದಿದ್ದೇವೆ' ಎಂದು ವಿದ್ಯಾರ್ಥಿಗಳು ಸಾರಿ ಹೇಳಿದರು. 'ಕನ್ನಡಪ್ರಭ' ಪತ್ರಿಕೆ ಮಾಧ್ಯಮ ಸಹಯೋಗದಲ್ಲಿ ಫೆ.9 ಹಾಗೂ 10ರಂದು ನಡೆದ ಈ ಹಬ್ಬದಲ್ಲಿ ವಿವಿಧ ಸಂಸ್ಕೃತಿ ಬಿಂಬಿಸುವ ನೃತ್ಯಗಳು, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ, ಫ್ಯಾಷನ್ ಶೋಗಳು ನಡೆಯಿತು. ಸಾಂಸ್ಕೃತಿ ಕಾರ್ಯಕ್ರಮಗಳು ನೋಡುಗರ ಕಣ್ಮನ ಸೆಳೆದವು.

ದೇಶದ ಹಲವು ರಾಜ್ಯಗಳ ವಿದ್ಯಾರ್ಥಿಗಳೂ ಎಕ್ಸ್‌ಪೋದಲ್ಲಿ ಪಾಲ್ಗೊಂಡಿದ್ದರು. ಉದ್ಯಮ, ವ್ಯವಹಾರದ ಕುರಿತು, ಉದ್ಯಮವನ್ನು ಗಟ್ಟಿಗೊಳಿಸುವ ಕುರಿತು ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದೆಲ್ಲದರ ನಡುವೆ ವಾಣಿಜ್ಯ ವಿಷಯದ ವಿದ್ಯಾರ್ಥಿಗಳು ಉದ್ಯಮದ ಬಗ್ಗೆ ಎಷ್ಟು ಜ್ಞಾನ ಹೊಂದಿದ್ದಾರೆ ಎಂದು ಮೇಳದಲ್ಲಿ ಪರೀಕ್ಷೆ ನಡೆಸಲಾಯಿತು. ರಸಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲಾಯಿತು.

**ಸಂಭ್ರಮದ ವೇದಿಕೆಗೆ ಮೇಳ:** ಎಫ್‌ಎಂ ರೇಡಿಯೊ ಪ್ರತಿನಿಧಿಗಳು ವಿದ್ಯಾರ್ಥಿಗಳಿಗಾಗಿ ಹಲವು ಬಗೆಯ ಆಟೋಟಗಳನ್ನು ಆಯೋಜಿಸಿ ಇಡೀ ಮೇಳವನ್ನು ಸಾಂಸ್ಕೃತಿಕ ವೇದಿಕೆಯಾಗಿ ಪರಿವರ್ತಿಸಿದರು. ವಿಜೇತರಿಗೆ ಪ್ರಶಸ್ತಿಯನ್ನೂ ನೀಡಲಾಯಿತು. ಫೆ.9 ಹಾಗೂ 10ರಂದು ಎರಡು ದಿನ ನಡೆದ ಕಾರ್ಯಕ್ರಮ ಕೇವಲ ಒಂದೇ ವಿಷಯ ಕೇಂದ್ರಿತವಾಗದೆ, ಸಂಸ್ಕೃತಿಕ ಮೇಳವಾಗಿ ಪರಿವರ್ತನೆಯಾಗಿತ್ತು. ಇಡೀ ಎರಡೂ ದಿನವೂ ಜೈನ್ ಕಾಲೇಜು ಆವರಣ ಉದ್ಯಮಿಗಳ ಜಾತ್ರೆಯಾಗಿತ್ತು. ಬೇರೆ ದೇಶಗಳಿಂದಲೂ ಉದ್ಯಮಿಗಳು ಆಗಮಿಸಿದ್ದರು. ಅವರೂ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

**ಯುವಜನರಿಗೆ ಜಾಗೃತಿ:** ಯುವಜನತೆ ಮದ್ಯಪಾನ, ಧೂಮಪಾನ ಹಾಗೂ ಮಾದಕ ವ್ಯಸನಗಳಿಗೆ ಬಲಿಯಾಗದಂತೆ ತಡೆಯಲು ನೃತ್ಯದ ಮೂಲಕ ಜಾಗೃತಿ ಮೂಡಿಸಲಾಯಿತು. ಮೇಳದಲ್ಲಿ ಕೇವಲ ಪಾಶ್ಚಾತ್ಯ ನೃತ್ಯಗಳಲ್ಲದೆ, ಭಾರತೀಯ ನೃತ್ಯ ಪ್ರಕಾರಗಳನ್ನು ಪ್ರದರ್ಶಿಸಲಾಯಿತು. ಕಿರುತೆರೆ ನಟಿ ಲಕ್ಷ್ಮಿ ಗೋಪಾಲಸ್ವಾಮಿ, ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ಅಭ್ಯರ್ಥಿ ಪಾಲ್ ಮಾರ್ಷಲ್ ಕಾರ್ಯಕ್ರಮದ ತೀರ್ಪುಗಾರರಾಗಿ ಆಗಮಿಸಿದ್ದರು.



ಜಯನಗರದ ಜೈನ್ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ಕಾರ್ಪೊರೇಟ್ ಎಕ್ಸ್‌ಪೋ-2016'ರಲ್ಲಿ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು